ಇದರಲ್ಲಿ ಬೇರೆ ಯಾರಾದರೂ ಆಸಕ್ತಿ ತೋರಿಸುವವರಿದ್ದರೆ ಅವರನ್ನು ಸೇರಿಸಿದ್ದೇವೆ. ಆ ಸಮಿತಿಯವರು ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಾರೆಂದು ಭಾವಿಸಿದ್ದೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಕಾಲವು ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೊಪ್ಪಳ ತಾಲ್ಲೂಕಿನಲ್ಲಿ ಜಿಂಕೆ ಧಾಮದ ಸ್ಥಾಪನೆ

3658 - ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಪ್ಪಳ ತಾಲ್ಲೂಕಿನ ಅಳವಂಡಿ, ಕವಲೂರು ಮುರಲಾಪುರ, ಗುದಿಗೇರಿ, ಯಲಬುರ್ಗಾ ತಾಲ್ಲೂಕಿನ ಬನ್ನಿಕೊಪ್ಪ ವೀರಾಪುರ ಚಂಡೂರು ಹಾಗೂ ಬೆಣಕಲ್ಲು ಗ್ರಾಮಗಳ ಎರೇ ಭೂಮಿ ಭಾಗದಲ್ಲಿ ಸಾವಿರಾರು ಚಿಗರೆ (ಜಿಂಕೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲಿಯ ಜಿಂಕೆಗಳನ್ನು ಹರಿಣ ಶಿಕಾರಿಗಳು (ಬೇಟೆಗಾರರು) ಹಾಗೂ ಸಾರ್ವಜನಿಕರು ಬೇಟೆಗಳನ್ನಾಡಿ ಕೊಲ್ಲುತ್ತಿದ್ದಾರೆ. ಇವುಗಳನ್ನು ಸಂರಕ್ಷಿಸುವ ಬಗ್ಗೆ ಜಿಂಕೆ ಸಂರಕ್ಷಣಾ ಧಾಮ ಸರ್ಕಾರ ಸ್ಥಾಪಿಸುವುದೇ?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಜಿಂಕೆ ಸಂರಕ್ಷಣಾಧಾಮ, ಸ್ಥಾಪಿಸುವ ಪ್ರಸ್ತಾವನೆ ಈಗ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ. ಆದರೆ ವನ್ಯ ಪ್ರಾಣಿ ಸಂರಕ್ಷಣಾ ಕಾಯಿದೆ 1972ರ ಪ್ರಕಾರ ಕಳ್ಳ ಬೇಟೆಗಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸಬೇಕಾದ 32ನೇ ಪಟ್ಟಿಯಲ್ಲಿರತಕ್ಕ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಜಮೀನುಗಳಲ್ಲಿಯ ರಸ್ತೆಗಳ ಅತಿಕ್ರಮಣವನ್ನು ತೆಗೆದುಹಾಕುವ ಬಗ್ಗೆ

3607 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮಾಂತರ ಪ್ರದೇಶದಲ್ಲಿ ಜಮೀನುಗಳಿಗೆ ಹೋಗುವ ರಸ್ತೆಗಳು ಅತಿಕ್ರಮಣವಾಗಿ ಸಂಚಾರಕ್ಕೆ ನಿರುಪಯುಕ್ತವಾದದ್ದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಅತಿಕ್ರಮ ತೆಗೆದು ಹಾಕಲಿಕ್ಕೆ ವಿಶೇಷ ಸರ್ವೆ ಮಾಡಿಸಲು ಸರಕಾರ ಯೋಚಿಸಿದೆಯೇ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು, ಹಲವು ಪ್ರದೇಶಗಳಲ್ಲಿ.

ಆ) ಇಂತಹ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಕಾನೂನಿನಲ್ಲಿ ಅವಕಾಶ ವಿರುವುದಿಲ್ಲವಾದ್ದರಿಂದ, ತೆರವುಗೊಳಿಸಲಾಗುವುದು.